MR. SPEAKER : I will take it up.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಮ್ಮ ಅಂತಿಮ ತೀರ್ಮಾನವೇ ತೀರ್ಮಾನ. ಅದರ ಬಗ್ಗೆ ಪ್ರಶ್ನೆ ಇಲ್ಲ. ಪ್ರಾಯಶಃ ಮುಂದೆ ನಮ್ಮ ಸದನದಲ್ಲಿ ಬೇಡಿಕೆಗಳ ಮೇಲೆ ಚರ್ಚೆ ನಡೆಯುವ ಸಮಯದಲ್ಲಿ ಈ ವಿಷಯದ ಮೇಲೆ ವ್ಯಾಪಕವಾಗಿ ಚರ್ಚೆ ಮಾಡಿದರೆ ಸರಿಹೋಗಬಹುದಲ್ಲವೇ?

MR. SPEAKER : They can do.

ಶ್ರೀ ಎಂ.ಪಿ. ಪ್ರಕಾಶ್ : ಏಕೆಂದರೆ ಸಮಯದ ಅಭಾವ ಇರುವುದರಿಂದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸಮಯದ ಅಭಾವ ಇದ್ದ ಕಾರಣ ನಮಗೆ ಪ್ರಸ್ತಾಪ ಮಾಡಲು ತೊಂದರೆ ಬಂದಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗ ಇದನ್ನು ಚರ್ಚೆಗೆ ಪ್ರತ್ಯೇಕವಾಗಿ ತೆಗೆದುಕೊಂಡು ಮತ್ತೆ ಸಮಯವನ್ನು ವ್ಯಯ ಮಾಡುವುದು ಬೇಡ. ಬೇಡಿಕೆ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಇದನ್ನು ಕೂಡ ಚರ್ಚೆ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಬೇಡಿಕೆ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಇದನ್ನೂ ಸಹ ಪ್ರಸ್ತಾಪ ಮಾಡಿದಾಗ ಇದಕ್ಕೆ ಸ್ಪೆಸಿಫಿಕ್ ಆಗಿ ಉತ್ತರ ಕೊಟ್ಟರೆ ಪರವಾಗಿಲ್ಲ. ಏನಾಗುತ್ತದೆಂದರೆ ಅಬಕಾರಿ ಇಲಾಖೆಗೆ ತಮಗೆ ಗೊತ್ತಿರುವ ಹಾಗೆ ಸುಮಾರು 840 ಕೋಟಿ ರೂಪಾಯಿ ಹೆಚ್ಚು ಕಡಿಮೆ ಅದರಲ್ಲಿ ಸಾಕಷ್ಟು ಕೋಟ್ಯಾಂತರ ರೂಪಾಯಿ ಲೀಕೇಜ್ ಆಗುವಾಗ ಮತ್ತು ಅದಕ್ಕೆ ರಕ್ಷಣೆ ಮಾಡತಕ್ಕಂಥದ್ದು ಅಥವಾ ಅದರಲ್ಲಿ ಸರ್ಕಾರಕ್ಕೆ ದುಡ್ಡು ಸಿಗುವಾಗಲೂ ಕೂಡ ಅದಕ್ಕೆ ತಿದ್ದುಪಡಿ ತರತಕ್ಕಂಥ ಅವಶ್ಯಕತೆ ಕೂಡ ಇರಲಿಲ್ಲ. ಇದನ್ನು ನಾವು ಪ್ರಸ್ತಾಪ ಮಾಡಿದಾಗ ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಉತ್ತರ ಕೊಟ್ಟರೆ ಒಳ್ಳೆಯದು. ಉತ್ತರ ಕೊಡುತ್ತಾ ಜನರಲ್ ಆಗಿ ಮಾತನಾಡುವ ಸಂದರ್ಭದಲ್ಲಿ ಡೀವಿಯೇಷನ್ ಮಾಡಿದರೆ....

MR SPEAKER : We will take it up specifically.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮಾಜವಾದಿ ಮುಖಂಡರು ಎಲ್ಲರೂ ಮುಂದಕ್ಕೆ ಹೋಗಿಬಿಡುತ್ತಾರೆ, ಆ ಉತ್ತರ ಅಲ್ಲಿಯೇ ಉಳಿದುಬಿಡುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಶಾಂಭವಿ ನದಿ ತೀರದಲ್ಲಿ ಸ್ಥಾಪಿಸಲಾಗಿರುವ ಕೈಗಾರಿಕೆಯಿಂದ ಆಗಿರುವ ಮಾಲಿನ್ಯದ ತೊಂದರೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಕಾರ್ಕಳ ತಾಲ್ಲೂಕಿನ ಕಡಂದಲೆ ಗ್ರಾಮದ ಕೊಡುಗೆ ಎಂಬ ಸಂಸ್ಥೆಯು ಅಮೇರಿಕಾದ ಏಂಜಲ್ ಹಾರ್ವ್ ಐಲ್ಯಾಂಡ್ (ಪ್ರೈ) ಸಂಸ್ಥೆಯ ಸಹಭಾಗಿತ್ವದಲ್ಲಿ ಡೈ ತಯಾರಿಸಲು ಕಾರ್ಖಾನೆಯನ್ನು ನಿರ್ಮಿಸುತ್ತಿರುವುದರಿಂದ, ಈ ಕಾರ್ಖಾನೆಯ ತ್ಯಾಜ್ಯ ವಸ್ತುಗಳು ನೂರು ಮೀಟರ್ ಹತ್ತಿರದಲ್ಲಿ ಇರುವ ಶಾಂಬವಿ ನದಿಗೆ ಹೋಗಿ

ಸೇರುತ್ತಿರುವುದರಿಂದ ಸುತ್ತಮುತ್ತಲಿನ ಗ್ರಾಮಸ್ಥರು, ಜಾನುವಾರುಗಳು ಹಾಗು ಕೃಷಿ ಭೂಮಿಗೆ ತುಂಬಾ ತೊಂದರೆಯಾಗುವುದರ ಬಗ್ಗೆ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಸಂಪ್ರದಾಯಕವಲ್ಲದ ಇಂಧನ ರಾಜ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಬಸವರಾಜ ನೀ ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳ ತಾಲ್ಲೂಕಿನ ಕಡಂದಾಲೆ ಎಂಬ ಸ್ಥಳದಲ್ಲಿ ಏಂಜಲ್ ಹಾರ್ಡ್ ಐಲ್ಯಾಂಡ್ (ಪ್ರೈ) ಲಿಮಿಟೆಡ್ ಎಂಬ ಸಂಸ್ಥೆಯು ಉದ್ದಿಮೆಯನ್ನು ಸ್ಥಾಪಿಸಲು ಸೆಪ್ಟೆಂಬರ್ 1996ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪೂರ್ವಾನುಮತಿ ಪತ್ರಕ್ಕೆ ಅರ್ಜಿ ಸಲ್ಲಿಸಿತು. ಈ ಸಂಸ್ಥೆಯು ಸಾವಯವ ಬಣ್ಣಗಳನ್ನು ತಯಾರು ಮಾಡುವ ಉದ್ದೇಶದಿಂದ ಮಂಡಳಿಯ ಪರವಾನಗಿಯನ್ನು ಕೇಳಿತು. ಬಣ್ಣಗಳ ತಯಾರು ಮಾಡುವ ಸಾಮರ್ಥ್ಯವು ವರ್ಷಕ್ಕೆ 450 ಟನ್‌ಗಳಷ್ಟು, ಪ್ರಮುಖವಾಗಿ ಸೋಡಿಯಂ ಕ್ಲೋರೈಡ್, ಅಸಿಟೇಟ್, ಸಲ್ಫೈಡ್, ಕ್ಯಾಲ್ಸಿಯಂ ಕ್ಲೋರೈಡ್, ಕ್ಲೋರೋಸಿಲ್, ಕಾಪ್ಪಿಕ್ ಪೊಟಾಷ್, ಕಾರ್ಬೋಸೋಲ್, ನೈಟ್ರಿಕ್ ಆಸಿಡ್ ಡೈ ಇಥೈಲ್ ಸಲ್ಫೆ ಟ್ ಹೈಕ್ಸಮೀನ್ ಮುಂತಾದವುಗಳನ್ನು ಕಚ್ಚಾವಸ್ತುಗಳಾಗಿ ಉಪಯೋಗಿಸುತ್ತಾರೆ.

ಸಾವಯವ ಬಣ್ಣಗಳನ್ನು ತಯಾರು ಮಾಡುವ ಉದ್ದಿಮೆಗೂ ಹಾಗೂ ಡೈ ತಯಾರು ಮಾಡುವ ಉದ್ದಿಮೆಗೂ ಬಹಳ ವ್ಯತ್ಯಾಸವಿರುತ್ತದೆ. ಡೈ ತಯಾರು ಮಾಡುವ ಉದ್ದಿಮೆಗಳನ್ನು ಭಾರತ ಸರ್ಕಾರವು ಅತೀ ಮಾಲಿನ್ಯಕಾರಕ ಉದ್ದಮೆಗಳ ಪಟ್ಟಿಯಲ್ಲಿ ಗುರುತಿಸಿ, ಇಂತಹ ಉದ್ದಿಮೆಗಳ ಪಟ್ಟಿಯಲ್ಲಿ ಸೇರಿಸಿದೆ. ಭಾರತ ಸರ್ಕಾರವು ಗುರುತಿಸಿರುವ ಅತೀ ಮಾಲಿನ್ಯ ಗುಂಪಿನಲ್ಲಿ ಬರುವುದಿಲ್ಲ. ಇಂತಹ ಉದ್ದಿಮೆಗಳು ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ. ಈ ವಿಷಯದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಎರಡೂ ರಾಜ್ಯಗಳಿಂದಲೂ ವಿವರಗಳನ್ನು ಪಡೆದಿರುತ್ತದೆ.

ಅತೀ ಮಾಲಿನ್ಯ ಉಂಟು ಮಾಡುವ ಉದ್ದಿಮೆಗಳಿಗೆ ಸಾಮಾನ್ಯವಾಗಿ ಪ್ರತಿ ವರ್ಷವು ಉದ್ದಿಮೆ ನಡೆಸಲು ಪರವಾನಗಿ ನೀಡಬೇಕಾಗಿರುತ್ತದೆ. ಆದರೆ ಇಂತಹ ಉದ್ದಿಮೆಗಳಿಗೆ ಮಹಾರಾಷ್ಟ್ರ ಮಾಲಿನ್ಯ ನಿಯಂತ್ರಣ ಮಂಡಳಿಯು 15 ವರ್ಷಕ್ಕೊಮ್ಮೆ ಸಮ್ಮತಿ ಪತ್ರವನ್ನು ನೀಡಿದೆ.

ಮಂಡಳಿಯು ಮೇಲಿನ ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಈ ಉದ್ದಿಮೆಗೆ ದಿನಾಂಕ 28-2-97 ರಂದು ಪೂರ್ವಾನುಮತಿ ಪತ್ರವನ್ನು ಈ ಕೆಳಕಂಡ ಪ್ರಮುಖ ನಿಬಂಧನೆಗಳೊಂದಿಗೆ ನೀಡಿರುತ್ತದೆ.

ಜಲ ಮಾಲಿನ್ಯ ನಿಯಂತ್ರಣ :

ಕಾರ್ಖಾನೆಯಿಂದ 90 ಘನ ಮೀಟರ್‌ನಷ್ಟು ದಿನಕ್ಕೆ ತ್ಯಾಜ್ಯ ನೀರು ಉತ್ಪತ್ತಿಯಾಗುತ್ತದೆ. ಈ ನೀರನ್ನು ಮಂಡಳಿಯು ನಿಗದಿ ಪಡಿಸಿದ ಸಂಸ್ಕರಣ ಘಟಕಗಳಲ್ಲಿ ಈ ಉದ್ದಿಮೆಯು ಶುದ್ಧೀಕರಿಸಬೇಕಾಗಿದೆ.

ಇದಲ್ಲದೆ ಮೇಲೆ ವಿವರಿಸಿದ ಶುದ್ಧೀಕರಿಸಿದ ನೀರನ್ನು ಸಂಪೂರ್ಣ ಪುನರ್ ಬಳಕೆ ಮಾಡಬೇಕಾಗಿರುವುದರಿಂದ ಅತ್ಯಾಧುನಿಕ ಹಾಗೂ ಹೆಚ್ಚಿನ ವೆಚ್ಚದ ರಿಸರ್ವ್ ಆಸ್ಮೊಸಿಸ್ ವಿಧಾನವನ್ನು ಉಪಯೋಗಿಸಿ ಶುದ್ಧೀಕರಿಸಿದ ಮಲಿನ ನೀರನ್ನು ಉತ್ಪಾದನೆಯಲ್ಲಿ ಮರು ಬಳಸಬೇಕಾಗಿದೆ. ಈ ಮೇಲಿನ ವಿಧಾನವನ್ನು ಅನುಸರಿಸಿದಾಗ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುವನ್ನು ಇನ್‌ಸಿನರೇಟರ್ ಮುಖಾಂತರ ಸುಡಬೇಕಾಗಿರುತ್ತದೆ. ಈ ಉದ್ದಿಮೆಯಿಂದ ಮಲಿನ ನೀರು ಮೇಲೆ ವಿವರಿಸದಂತೆ ಹೊರ ಬಿಡಲಾಗುವುದಿಲ್ಲ. ಆದ್ದರಿಂದ ಯಾವ ತ್ಯಾಜ್ಯ ವಸ್ತುಗಳು ನದಿಗೆ ಸೇರುವ ಅವಕಾಶವಿರುವುದಿಲ್ಲ.

ಉದ್ದಿಮೆಯು ಗೃಹ ಬಳಕೆಯ ತ್ಯಾಜ್ಯ ನೀರನ್ನು ಸೆಪ್ಟಿಕ್ ಟ್ಯಾಂಕ್ ಮತ್ತು ಸೋಕ್ ಪಿಟ್‌ಗಳ ಮೂಲಕ ಶುದ್ಧೀಕರಿಸಲಾಗುತ್ತಿದೆ.

ವಾಯು ಮಾಲಿನ್ಯ ನಿಯಂತ್ರಣ :

ಉದ್ದಮೆಯ ಹೊಂದಿರುವ ಬಾಯ್ಲರ್ (ಪ್ರತಿ ಗಂಟೆಗೆ 3000 ಕೆಜಿ), ಥರ್ಮಾ ಫ್ಲೂಯಿಡ್ ಹೀಟರ್, 3 ಡಿ ಜಿ ಸೆಟ್ (750 ಕೆವಿಎ), ಪಲ್ವಿರೈಸರ್ (ಪ್ರತಿ ಗಂಟೆಗೆ 250 ಕೆಜಿ) ಹಾಗೂ 4 ಬಾಲ್ ಮಿಲ್ಲುಗಳಿಗೆ ಅಳವಡಿಸಬೇಕಾದ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಮತ್ತು ಚಿಮಣಿಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದಂತೆ ಅಳವಡಿಸಲು ಒಪ್ಪಿಸಿರುತ್ತಾರೆ. ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ಪರಿಸರ ಇಲಾಖೆಯವರಿಗೆ ಅನುಮತಿ ಪತ್ರಕ್ಕಾಗಿ ಅರ್ಜಿಯನ್ನು ಕೊಟ್ಟಿಲ್ಲವೆಂದು ಉತ್ತರವನ್ನು ಕೊಡಲಾಗಿತ್ತು. ಆದರೆ ನೆನ್ನೆಯ ದಿವಸ ಮತ್ತೆ ಫೈಲ್‌ನ್ನು ಪರಿಶೀಲನೆ ಮಾಡಿದಾಗ ಸದರಿ ಉದ್ದಿಮೆಯು ಈಗಾಗಲೇ ಅನುಮತಿಗಾಗಿ ಅರ್ಜಿಯನ್ನು ಕೊಟ್ಟಿದ್ದಾರೆ. ಆದುದರಿಂದ ಮಾನ್ಯ ಸದಸ್ಯರುಗಳನ್ನು ಅದನ್ನು ತಿದ್ದುಪಡಿಯನ್ನು ಮಾಡಿಕೊಳ್ಳಬೇಕು.

ಸದರಿ ಉದ್ದಿಮೆಯು ಪರಿಸರ ಇಲಾಖೆ ವತಿಯಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ಇನ್ನೂ ಅರ್ಜಿ ಸಲ್ಲಿಸಿರುವುದಿಲ್ಲ. ಪರಿಸರ ವಿಮೋಚನಾ ಪತ್ರ ಪಡೆಯುವುದು ಅತಿ ಅವಶ್ಯಕವಾಗಿರುತ್ತದೆ. ಉದ್ದಿಮೆಯ ಅರ್ಜಿ ಸಲ್ಲಿಸಿದ ನಂತರ ಅದಕ್ಕಾಗಿಯೇ ನೇಮಿಸಿರುವ ಪರಿಣತರುಗಳ ಸಮಿತಿಯು ಪರಿಶೀಲಿಸಿ, ಈ ಉದ್ದಿಮೆಯಿಂದ ಪರಿಸರಕ್ಕೆ ಧಕ್ಕೆ ಆಗದಂತೆ ಖಚಿತ ಪಡಿಸಿಕೊಂಡ ನಂತರ ಪರಿಸರ ವಿಮೋಚನಾ ಪತ್ರ ನೀಡಲಾಗುವುದು. ಸದರಿ ಉದ್ದಿಮೆ ಇನ್ನೂ ಯಾವ ತರಹದ ಉತ್ಪಾದನೆಗೆ ತೊಡಗಿರುವುದಿಲ್ಲ. ಉತ್ಪಾದನೆಗೆ ತೊಡಗುವ ಮುನ್ನ ಪರಿಸರ ವಿಮೋಚನಾ ಪತ್ರ ಪಡೆದು ಅದರಲ್ಲಿ ಹಾಕಿದ ನಿಬಂಧನೆಗಳನ್ನು ಪಾಲಿಸುವುದರ ಜೊತೆಗೆ ಮಾಲಿನ್ಯ ನಿಯಂತ್ರಣ ಮಂಡಳಿ ಈಗಾಗಲೇ ಹಾಕಿರುವ ಷರತ್ತುಗಳನ್ನು ಪೂರೈಸಿ, ಉತ್ಪಾದನೆ ಆರಂಭಿಸಿರುವ 45 ದಿನಗಳ ಮುನ್ನ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಲ ಹಾಗೂ ವಾಯು ಮಾಲಿನ್ಯ ಕಾಯ್ದೆಯಲ್ಲಿ ಪ್ರತ್ಯೇಕವಾಗಿ ಪರವಾನಗಿಯನ್ನು ಪಡೆಯಬೇಕಾಗುವುದು. ಪರವಾನಗಿಯನ್ನು ನೀಡುವ ಮೊದಲು ಮಂಡಳಿಯು ತಾನು ವಿಧಿಸಿದ ಷರತ್ತುಗಳ ಪಾಲನೆ ಬಗ್ಗೆ ಖಚಿತ ಪಡಿಸಿಕೊಂಡು ನಂತರವೇ ತನ್ನ ಪರವಾನಗಿಯನ್ನು ಕೊಡುವುದು.

ಮಂಡಳಿಯು ಈಗಾಗಲೇ ವಿಧಿಸಿರುವ ಷರತ್ತುಗಳನ್ನು ಗಮನಿಸಿದಕ್ಕೆ ಹಾಗೂ ಪರಿಸರ ಇಲಾಖೆ ಪರಿಸರ ವಿಮೋಚನಾ ಪತ್ರದಲ್ಲಿ ಸೂಚಿಸುವ ಷರತ್ತುಗಳ ಪಾಲನೆ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಉದ್ದಿಮೆಗೆ ಉತ್ಪಾದನೆಗೆ ಪರವಾನಗಿ ನೀಡುವುದರಿಂದ ಈ ಷರತ್ತುಗಳ ಪಾಲನೆಯಿಂದ ಉದ್ದಿಮೆಯು ಕಲುಷಿತ ನೀರನ್ನು ಶುದ್ಧೀಕರಿಸಿ ತನ್ನ ಪ್ರದೇಶದಲ್ಲೇ ಪುನರ್ ಬಳಸುತ್ತಿರುವುದರಿಂದ ಮತ್ತು ತ್ಯಾಜ್ಯ ವಸ್ತುಗಳನ್ನು ಇನ್‌ಸಿನರೇಟರ್‌ನಲ್ಲಿ ಸುಡುತ್ತಿರುವುದರಿಂದ ಈ ಉದ್ದಿಮೆಯಿಂದ ಹೊರಬರುವ ತ್ಯಾಜ್ಯಗಳನ್ನು ಶಾಂಭವಿ ನದಿ ಸೇರುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದುದರಿಂದ, ಆ ಪ್ರದೇಶದಲ್ಲಿರುವ ಗ್ರಾಮಸ್ಥರಿಗೆ, ಜಾನುವಾರುಗಳಿಗೆ ಹಾಗೂ ಕೃಷಿ ಭೂಮಿಗೆ ಯಾವ ವಿಧವಾದ ತೊಂದರೆ ಹಾಗೂ ಹಾನಿ ಆಗದಂತೆ ನೋಡಿಕೊಳ್ಳಲಾಗುತ್ತಿದೆ.

12.10 ಪಿ.ಎಂ

+ ಶ್ರೀ ಎಸ್ ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ನೋಡಿದ ಮೇಲೆ ಮನಸ್ಸಿಗೆ ಸಂಶಯವಾಗಿರತಕ್ಕಂಥದ್ದು ಏನೆಂದರೆ ಈ ಹೇಳಿಕೆಯನ್ನು ಇಲಾಖೆಯವರು ಕೊಟ್ಟಿರುತ್ತಾರೋ ಅಥವಾ ಕಂಪನಿಯ ಮ್ಯಾನೇಜಿಂಗ್ ಡೈರಕ್ಟರ್‌ರವರು ಕೊಟ್ಟಿದ್ದಾರೋ ಎಂದು ಬಹಳ ದುಃಖದಿಂದ ಇಲ್ಲಿ ಹೇಳುತ್ತಿದ್ದೇನೆ. ಅವರು ವಿಶೇಷವಾಗಿ ಈ ಹೇಳಿಕೆಯಲ್ಲಿ " ಕಾರ್ಖಾನೆಯಿಂದ 90 ಘನ ಮೀಟರ್‌ನಷ್ಟು ದಿನಕ್ಕೆ ತ್ಯಾಜ್ಯ ನೀರು ಉತ್ಪತ್ತಿಯಾಗುತ್ತದೆ. ಈ ನೀರನ್ನು ಮಂಡಳಿಯು ನಿಗದಿಪಡಿಸಿದ ಸಂಸ್ಕರಣ ಘಟಕಗಳಲ್ಲಿ ಈ ಉದ್ದಿಮೆಯು ಶುದ್ಧೀಕರಿಸಬೇಕಾಗಿದೆ. ಇದಲ್ಲದೆ ಮೇಲೆ ವಿವರಿಸಿದ ಶುದ್ಧೀಕರಿಸಿದ ನೀರನ್ನು ಸಂಪೂರ್ಣ ಪುನರ್ ಬಳಕೆ ಮಾಡಬೇಕಾಗಿರುವುದರಿಂದ ಅತ್ಯಾಧುನಿಕ ಹಾಗೂ ಹೆಚ್ಚಿನ ವೆಚ್ಚದ ರಿವರ್ಸ್ ಅಸ್ಮೊಸಿನ್ ವಿಧಾನವನ್ನು ಉಪಯೋಗಿಸಿ ಶುದ್ಧೀಕರಿಸಿದ ಮಲಿನ ನೀರನ್ನು ಉತ್ಪಾದನೆಯಲ್ಲಿ ಮರು ಬಳಸಬೇಕಾಗಿದೆ. ಇದರ ಬಗ್ಗೆ ನಾನು ಮಾಹಿತಿಯನ್ನು ಕಲೆಕ್ಟ್ ಮಾಡಿದಾಗ ಭೂಪಾಲದ ಅನಿಲ ದುರಂತವಾದ ಮೇಲೆ 1985ರಲ್ಲಿ ರಾಷ್ಟ್ರದಲ್ಲಿ ಒಂದು ಹೊಸ ಕಾನೂನು ಬಂತು. ಯಾವುದೇ ರೀತಿಯ ಅಪಾಯಕಾರಿ ಉದ್ಯಮಗಳು ಯಾವುದು ಇದೆ, ಅದನ್ನು ಶಾಲೆಗಳ ಹತ್ತಿರ, ವಸತಿಯ ಗೃಹಗಳು ಇರುವಂತಹ ಹತ್ತಿರ ಪ್ರಾರಂಭ ಮಾಡುವ ಹಾಗೆಇಲ್ಲ. ಇವತ್ತು ಈ ಡೈ ಮ್ಯಾನುಫ್ಯಾಕ್ಚರಿಂಗ್ ಯೂನಿಟ್ ಏನಿದೆ, ಇದರ ಪ್ರೋಸೆಸ್ಸೇ ಬಹಳ ಅಪಾಯಕಾರಿಯಾದುದು. The Ministry of Environment and Forest, it has placed it under scheduled -I of 1994 Act ಅದರ ಪ್ರಕಾರ Environment Impact Assessment of a project is mandatory, whether it is a dye manufacturing unit or a figment unit. ಈ ರೀತಿಯಾಗಿ ಇದ್ದಾಗಲೂ ಕೂಡ ಕೇವಲ 100 ಮೀಟರ್‌ದೂರದಲ್ಲಿ ಶಾಂಭವಿ ನದಿ ಇದೆ, ಪಕ್ಕದಲ್ಲಿಯೇ ಪ್ರೌಢ ಶಾಲೆ ಇದೆ, ಪ್ರಾಥಮಿಕ ಶಾಲೆಯೂ ಸಹ ಇದೆ. ಮಕ್ಕಳಿಗೋಸ್ಕರವಾಗಿರುವ ವಸತಿಯ ಶಾಲೆಯೂ ಸಹ ಅಲ್ಲಿ ನಡೆಯುತ್ತಿದೆ. ಅದರ ಜೊತೆಗೆ ಗುತ್ತುಕಾಡು ಎನ್ನುವ ಕಾದಿರಿಸಿದ ಒಂದು ಕಾಡೂ ಕೂಡ ಅಲ್ಲಿದೆ. ಇಷ್ಟೆಲ್ಲಾ ಇದ್ದರೂ ಕೂಡ ಸರ್ಕಾರದವರು ಅನುಮತಿಯನ್ನು, ಪರವಾನಗಿಯನ್ನು ಕೊಡುವುದಕ್ಕೆ ಮುಂದೆ ಹೋಗುತ್ತಿದ್ದಾರೆ. ಬಹಳ ದುಃಖವಾಗುವಂಥದ್ದು ಎಂದರೆ

ಅಲ್ಲಿನ ನಾಗರೀಕರು, ಸನ್ಮಾನ್ಯ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ವೀರಪ್ಪಮೊಯಿಲಿಯವರ ಮುಖಾಂತರ ಕೂಡ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು 25.1.1997, 15.2.1997, 27.2.1997 ವಿವಿಧ ಹಂತದ ಅಧಿಕಾರಿಗಳಿಗೆ ಇದರ ಬಗ್ಗೆ ಅರ್ಜಿಯನ್ನು ಸಲ್ಲಿಸುತ್ತಾ ಬಂದಿದ್ದರು. ಆದರೆ ಅವರಿಗೆ ನಮ್ಮ ಸರ್ಕಾರದ ಇಲಾಖೆಯವರು ಮಾಹಿತಿಯನ್ನು ಕೊಡುವುದಿಲ್ಲ ಈ ಕಾರ್ಖಾನೆ ಮ್ಯಾನೇಜಿಂಗ್ ಡೈರಕ್ಟರ್‌ರವರ ಮನೆಗೆ ಪರವಾನಗಿಯನ್ನು ತೆಗೆದುಕೊಂಡು ಹೋಗಿ ಕೊಡುವಂತಹ ಪರಿಸ್ಥಿತಿಗೆ ನಾವು ಬಂದು ಬಿಟ್ಟಿರುತ್ತೇವೆ. ಇವತ್ತು ಏನು ಯೂನಿಟ್‌ನ್ನು ಸ್ಥಾಪಿಸುತ್ತಿದ್ದಾರೆ ಅದರ ಬಗ್ಗೆ ನನಗೆ ಒಂದು ಖಚಿತವಾದಂತಹ ಮಾಹಿತಿಯು ಇದೆ. These units have been banned in U.S.A. ಅಂಥ ಯೂನಿಟ್‌ನ್ನು ನಮ್ಮ ಭಾರತದಲ್ಲಿ ಕರ್ನಾಟಕದಲ್ಲಿ ಡಂಪಿಂಗ್ ಯಾರ್ಡ್ ಎಂದು ತಿಳಿದುಕೊಂಡು ಇಲ್ಲಿ ತಂದು ಹಾಕಿ, ಶಾಂಭವಿ ನದಿಯನ್ನು ಸಹ ಕೆಡಿಸಿ, ಕೇವಲ ಶಾಂಭವಿ ನದಿ ಮಾತ್ರವಲ್ಲ, ಕಡಂದಾಲೆ, ಮುಡುಕೂರು, ಎಲಿಂಜೆ, ಉಳುವಾಡಿ, ಬಳಕುಜೆ, ಪಲಿಮಾರು, ಮುಲ್ಕಿ, ಮುಂತಾದ ಹಲವಾರು ಗ್ರಾಮಗಳು ಆ ನೀರಿನ ಮೇಲೆ ಆಧಾರ ಮಾಡಿ ನಿಂತಿರುವುದು. ಅಂಥ ಒಂದು ನದಿಯನ್ನು ಕೆಡಿಸಿ, ಗ್ರಾಮವನ್ನೂ ಸಹ ಕೆಡಿಸಿ ಆ ಮಕ್ಕಳು ಮತ್ತು ವಸತಿ ಗೃಹವನ್ನು ಕೆಡಿಸಿ ಏನು ಕರೆನ್ಸಿ ನೋಟ್‌ಗೆ ಉಪಯೋಗವನ್ನು ಮಾಡತಕ್ಕಂತಹ ಡೈ ಫ್ಯಾಕ್ಟರಿಗೆ ಏನು ಅನುಮತಿಯನ್ನು ಕೊಡುತ್ತಿದ್ದೀರಿ, ದಯವಿಟ್ಟು ಪರಿಸರದ ದೃಷ್ಟಿಯಿಂದ, ಅಲ್ಲಿಯ ನಾಗರೀಕರ ದೃಷ್ಟಿಯಿಂದ ಒಟ್ಟಿನಲ್ಲಿ ಎನು ದೊಡ್ಡದಾಗಿ ಬಾಗಿಲನ್ನು ತೆರೆದು ಬನ್ನಿ ಬೇರೆ ಕಡೆಯಲ್ಲಿ ಬ್ಯಾನ್ ಮಾಡಿದ್ದರೂ ಕೂಡ ನಮ್ಮಲ್ಲಿ ಬನ್ನಿ ಎಂಥದ್ದು ಆದರೂ ಉದ್ಯಮವನ್ನು ಪ್ರಾರಂಭ ಮಾಡಿ ಹಾಳಾಗುವಂಥದ್ದಕ್ಕೆ ನಾವು ಅವಕಾಶವನ್ನು ಕೊಡುತ್ತೇವೆ ಅನ್ನುವುದನ್ನು ಬಿಟ್ಟು ಇಂತಹ ಕಾರ್ಖಾನೆಗಳ ಸ್ಥಾಪನೆಗೆ ಅವಕಾಶವನ್ನು ಕೊಡಬಾರದೆಂದು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ನೀ ಶಿವಣ್ಣನರವ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕಂತಹ ಡೈ ಎಂದು ಏನು ಹೇಳುತ್ತಿದ್ದಾರೆ, ಅದು ಡೈ ಉದ್ಯಮೆ ಅದು ಅಲ್ಲ ಪಿಗ್‌ಮೆಂಟ್ ಎಂದು ಹೇಳಿ ಸಾವಯವ ಬಣ್ಣದ ಮೂಲಕ ತಯಾರು ಮಾಡುವಂತಹ ಉದ್ಯಮೆ. ಮತ್ತು ಕೇಂದ್ರ ಸರ್ಕಾರದ ಕೇಂದ್ರ ಮಾಲಿನ್ಯ ಮಂಡಳಿ ಷೆಡ್ಯೂಲ್ಡ್ -1ರಲ್ಲಿ 17 ಅತ್ಯಂತ ಮಾಲಿನ್ಯಕಾರಕವಾದಂತಹ ಉದ್ಯಮೆಗಳು ಅದರಲ್ಲಿ ಇದು ಬರುತ್ತದೆ. ಡೈ ಕೂಡ ಆ 17 ಅತ್ಯಂತ ಮಾಲಿನ್ಯಕಾರಕವಾದಂತಹ ಉದ್ಯಮೆಯಲ್ಲಿ ಬರುತ್ತದೆ. ಡೈ 17ರಲ್ಲಿ ಬರುವುದರಿಂದ ಅದು ಅಲ್ಲ. ಅಲ್ಲಿ ಪಿಗ್‌ಮೆಂಟ್ ಉದ್ಯಮೆಯು ಪ್ರಾರಂಭವಾಗುತ್ತಿರುವಂಥದ್ದು. ಆ ಕಾರಣದಿಂದ ಈ ಒಂದು ಉದ್ಯಮೆದಿಂದ ಯಾವುದೇ ತ್ಯಾಜ್ಯ ವಸ್ತುವೇ ಆಗಲಿ ಅಥವಾ ಜಲಾ ಮಾಲಿನ್ಯ ಮಾಡತಕ್ಕಂಥದ್ದೇ ಆಗಲಿ, ವಾಯು ಮಾಲಿನ್ಯ ಮಾಡತಕ್ಕಂಥದ್ದೇ ಆಗಲಿ ಇದರಿಂದ ಉದ್ಭವಿಸುವುದಿಲ್ಲವೆಂದು ನಮ್ಮ ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಯವರು ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈಗಾಗಲೇ ಪರ್ಮಿಷನ್ ಕೊಟ್ಟಿದ್ದಾರೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಆ ಉತ್ತರವನ್ನು ತರಿಸಿಕೊಂಡು ನೋಡಿ. ನಮ್ಮ ಸುರೇಶ್ ಕುಮಾರ್‌ರವರು ಹೇಳಿದಂತೆ ಆ ಕಾರ್ಖಾನೆಯ ಮ್ಯಾನೇಜಿಂಗ್ ಡೈರಕ್ಟರ್‌ರವರು ಕೊಟ್ಟಂತಹ ಉತ್ತರವನ್ನು ಓದುತ್ತಿದ್ದೀರೋ, ತಾವು ಏನಾದರೂ ಮುಂದೆ ಅದನ್ನು ಓದಿರುತ್ತೀರಾ? ತಾವು ದಯಮಾಡಿ ಗಮನಿಸಿ ತಾವು ಕೊಟ್ಟಿರುವಂತಹ ಉತ್ತರದ ಎರಡನೆಯ ಪುಟದಲ್ಲಿ ಸದರಿ ಉದ್ದಿಮೆಯು ಪರಿಸರ ಇಲಾಖೆಯ ವತಿಯಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ಇನ್ನೂ ಅರ್ಜಿ ಸಲ್ಲಿಸಿರುವುದಿಲ್ಲ. ಈಗ ಹೇಳುತ್ತಿದ್ದೀರಿ ಅರ್ಜಿಯನ್ನು ಸಲ್ಲಿಸಿದ್ದಾರೆಂದು, ಅವರು ನಿನ್ನೆಯೋ ಮೊನ್ನೆಯೋ ಸಲ್ಲಿಸಿದ್ದಾರೆ. ಪರಿಸರ ವಿಮೋಚನಾ ಪತ್ರ ಪಡೆಯುವುದು ಅತಿ ಅವಶ್ಯಕವಾಗಿರುತ್ತದೆ. ಉದ್ದಿಮೆ ಅರ್ಜಿ ಸಲ್ಲಿಸಿದ ನಂತರ ಅದಕ್ಕಾಗಿಯೇ ನೇಮಿಸಿರುವ ಪರಿಣಿತರುಗಳ ಸಮಿತಿಯು ಪರಿಶೀಲಿಸಿ, ಈ ಉದ್ದಿಮೆಯಿಂದ ಪರಿಸರಕ್ಕೆ ಧಕ್ಕೆ ಆಗದಂತೆ ಖಚಿತ ಪಡಿಸಿಕೊಂಡು ನಂತರ ಪರಿಸರ ವಿಮೋಚನಾ ಪತ್ರ ನೀಡಲಾಗುವುದು. ಸದರಿ ಉದ್ದಿಮೆಯು ಇನ್ನೂ ಯಾವ ತರಹದ ಉತ್ಪಾದನೆಗೆ ತೊಡಗಿರುವುದಿಲ್ಲ. ಮತ್ತು ಕೊನೆಯ ಪುಟದಲ್ಲಿ ತಾವು ಏನು ಉತ್ತರವನ್ನು ಕೊಟ್ಟಿರುತ್ತೀರಿ, ಎಂದರೆ, ಪರಿಸರ ಇಲಾಖೆ ಪರಿಸರ ವಿಮೋಚನಾ ಪತ್ರದಲ್ಲಿ ಸೂಚಿಸಿರುವ ಷರತ್ತುಗಳ ಪಾಲನೆ ಬಗ್ಗೆ ದೃಢಪಡಿಸಿಕೊಂಡ ನಂತರವೇ ಉದ್ದಿಮೆಗೆ ಉತ್ಪಾದನೆಗೆ ಪರವಾನಗಿ ನೀಡುವುದರಿಂದ ಈ ಷರತ್ತುಗಳ ಪಾಲನೆಯಿಂದ ಉದ್ದಿಮಯು ಕಲುಷಿತ ನೀರನ್ನು ಶುದ್ಧೀಕರಿಸಿ ತನ್ನ ಪ್ರದೇಶದಲ್ಲೇ ಪುನರ್ ಬಳಸುತ್ತಿರುವುದರಿಂದ ಮತ್ತು ತ್ಯಾಜ್ಯ ವಸ್ತುಗಳನ್ನು ಇನ್‌ಸಿನರೇಟರ್‌ನಲ್ಲಿ ಸುಡುತ್ತಿರುವುದರಿಂದ ಈ ಉದ್ದಿಮೆಯಿಂದ ಹೊರಬರುವ ತ್ಯಾಜ್ಯಗಳನ್ನು ಶಾಂಭವಿ ನದಿ ಸೇರುವ ಪ್ರಶ್ನೆ ಉದ್ಭವಿಸುವುದಿಲ್ಲ. ಅವರು ಇನ್ನೂ ಲೈಸನ್ಸ್ ಅಪ್ಲೈನೇ ಮಾಡಿಲ್ಲ. ಲೈಸನ್ಸ್ ಕೊಟ್ಟಿಲ್ಲ. ಆದರೆ ಮುಂದೆ ಇವರು ಹೇಳಿರುವಂತೆ ತ್ಯಾಜ್ಯ ನೀರು ಹೊರಗಡೆ ಬರುವುದಿಲ್ಲ. ಒಳ್ಳೆಯ ನೀರನ್ನು ಮಾಡುತ್ತೇವೆ. " ಅದಕ್ಕೆ ಬೇರೆ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದೇವೆಂದು" "ಈಗಾಗಲೇ ಉತ್ಪಾದನೆಯನ್ನು ಪ್ರಾರಂಭ ಮಾಡಿದ್ದಾನೆಂದು" ಇನ್ನೊಂದು ಕಡೆ ಕೊನೆಯ ಪುಟದಲ್ಲಿ ಉತ್ತರವನ್ನು ಕೊಟ್ಟಿರುತ್ತೀರಿ ಎರಡನೆಯದಾಗಿ ಅಲ್ಲಿರುವಂತಹ ಗ್ರಾಮಪಂಚಾಯಿತಿ ಇದುವರೆಗೆ ಲೈಸನ್ಸ್ ಕೊಟ್ಟಿಲ್ಲ. ಲೈಸನ್ಸ್ ಕೊಡದೇ ತಾವೇ ಹೇಳಿರುವ ಪ್ರಕಾರವಾಗಿ ಸದರಿ ಉದ್ದಿಮೆಯು ಪರಿಸರ ಇಲಾಖೆಯ ವತಿಯಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ಇನ್ನೂ ಅರ್ಜಿಯನ್ನೇ ಸಲ್ಲಿಸದೆ ಅನುಮತಿಯನ್ನು ಸಹ ಕೊಡದೇ ಕಟ್ಟಡ ಹೇಗೆ ಪ್ರಾರಂಭವಾಗುತ್ತದೆ? ಲೈಸನ್ಸ್ ಯಾವ ರೀತಿಯಲ್ಲಿ ಕೊಡುತ್ತೀರಿ? ಇದು ನನಗೆ ಅರ್ಥವೇ ಆಗುತ್ತಿಲ್ಲ. ಅದಕ್ಕಾಗಿ ನಾನು ನಿಮಗೆ ಒತ್ತಾಯವನ್ನು ಮಾಡುವುದೇನೆಂದರೆ, ಸ್ವತಃ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ಇದರ ಬಗ್ಗೆ ಅಬ್ಜೆಕ್ಷನ್ ಮಾಡಿದ್ದಾರೆ. ಗ್ರಾಮಾಂತರದವರು ಸಹ 25.1.1997 ಮತ್ತು 27.2.1997ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ಉಪ ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರ್‌ರವರಿಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಆದರೆ ಇದುವರೆಗೆ ತಾವು ಏನು ಅಲ್ಲಿಗೆ ಬಂದು ತನಿಖೆಯನ್ನು ಮಾಡಿಲ್ಲ. ಇದರ ಪಕ್ಕದಲ್ಲಿ ಸುಬ್ರಮಣ್ಯಸ್ವಾಮಿ ಹೈಸ್ಕೂಲ್ ಮತ್ತು ಸರ್ಕಾರಿ ಬಾಲಕರ ಹೈಸ್ಕೂಲ್ ಶಾಲೆಯ 200 ಜನರು ವಾಸ ಮಾಡುತ್ತಿದ್ದಂತಹ ಗುಡಿಸಲುಗಳನ್ನು ಈಗಾಗಲೇ ಎತ್ತಂಗಡಿಯನ್ನು ಮಾಡಿಸಿರುತ್ತೀರಿ. ಅಲ್ಲಿಯೇ

ಫಲವತ್ತಾದ, ದಟ್ಟವಾದಂತಹ ಕಾಡೂ ಸಹ ಇದೆ. ಇದರ ಬಗ್ಗೆ ಸನ್ಮಾನ್ಯ ಸಚಿವರಿಗೂ ಮತ್ತು ಅಧ್ಯಕ್ಷರಿಗೂ ಸಹ ಕಳುಹಿಸಿಕೊಟ್ಟಿದ್ದೇನೆ. ಆದುದರಿಂದ ದಯಮಾಡಿ ಈ ಲೈಸನ್ಸ್‌ನ್ನು ರದ್ದು ಮಾಡಿ. ಕಟ್ಟಡವನ್ನು ಡಿಮಾಲಿಷ್‌ಮಾಡಿ ಯಾವ ಕಾರಣಕ್ಕೂ ಅವರಿಗೆ ಇಲ್ಲಿ ಕಾರ್ಖಾನೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು. ಮುಂಬೈನಲ್ಲಿ ಈ ಒಂದು ಉದ್ದಿಮೆಯನ್ನು ಲೈಸನ್ಸ್ ಕೊಡದೇ ಇರುವುದಕ್ಕೆ ಇಲ್ಲಿಗೆ ಓಡಿ ಬಂದಿದ್ದಾರೆ. ಅದಕ್ಕೆ ನೀವು ಅವಕಾಶವನ್ನು ಕೊಡುತ್ತಿದ್ದೀರಿ.

+ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು ಹೇಳಿದ ಹಾಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆದಿಲ್ಲ. ಅದರ ಒಟ್ಟಿಗೆ ಪಂಚಾಯಿತಿಯಿಂದ ಲೈಸೆನ್ಸ್ ಕೊಟ್ಟಿಲ್ಲ; ಆದರೆ ಅಲ್ಲಿ ಕಟ್ಟಡದ ಕೆಲಸ ಪ್ರಾರಂಭವಾಗಿದ್ದು ಮುಕ್ಕಾಲು ಭಾಗ ಕಟ್ಟಿಯಾಗಿದೆ. ಅದಕ್ಕೆ ಅವರು ಈ ಮಾತನ್ನು ಹೇಳಿರುವುದು. ಅದಕ್ಕೆ ಬೇಕಾದ ಕಚ್ಚಾ ವಸ್ತುಗಳು ಏನಿದೆ ಸೋಡಿಯಂ ಕ್ಲೋರೈಡ್, ಅಸಿಟೇಟ್ ಸಲ್ಫೇಟ್, ಕ್ಯಾಲ್ಸಿಯಂ ಕ್ಲೋರೈಡ್ ಇವೆಲ್ಲಾ ಸಾವಯವ ಬಣ್ಣ ತಯಾರಿಸುವುದಕ್ಕೆ ಎಂದು ಹೇಳುತ್ತಾರೆ. ಇದರಲ್ಲೂ ಕೂಡ ಪರಿಸರ ಮಾಲಿನ್ಯ ಮಾಡತಕ್ಕ ತ್ಯಾಜ್ಯ ವಸ್ತುಗಳು ನಿರ್ಮಾಣವಾಗುತ್ತದೆ. ಅದನ್ನು ನೀವು ಏನು ಪ್ಯೂರಿಫೈ ಮಾಡುತ್ತೇವೆಂದು ಹೇಳುತ್ತೀರಿ ಹಾಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಮುಖ್ಯವಾಗಿ ಗ್ರಾಮಾಂತರದ ಮೂಲೆಯಲ್ಲಿದೆ; ಮತ್ತು ವಾಹನ ಸಂಚಾರ ಬಹಳ ಕಷ್ಟದಲ್ಲಿ ಆಗುತ್ತಿದೆ. ಅಂಥ ಸಂದರ್ಭದಲ್ಲಿ ಅಲ್ಲಿ ಅಧಿಕಾರಿಗಳು ಹೋಗುವುದಕ್ಕೆ ಆಗುತ್ತದೆಯೇ? ಅಧಿಕಾರಿಗಳೂ ಸಹ ಹೋಗುವುದಕ್ಕೆ ಸಾಧ್ಯವಿಲ್ಲದ ಪ್ರದೇಶದಲ್ಲಿ ಇಂಥ ಉದ್ಯಮ ಪ್ರಾರಂಭ ಮಾಡಿದಾಗ ನಮಗೆಲ್ಲ ಗೊತ್ತಿರುವ ಹಾಗೆ, ಅದು ನಾವು ಹೇಳಿದಂಥ ಪ್ರೊಸೀಜರ್ ಪ್ರಕಾರ ಖಂಡಿತವಾಗಿ ಆಗುವುದಿಲ್ಲ. ಆ ದೃಷ್ಟಿಯಿಂದ ಆ ಊರಿನ ಜನರು 2-3 ಸಾರಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಕೊಟ್ಟಿದ್ದಾರೆ. ಆ ಊರಿನ ಜನರಿಗೆ ಸರಿಯಾದ ಮಾಹಿತಿ ಕೊಟ್ಟಿಲ್ಲ. ಇದರ ಜೊತೆಗೆ ಮಾನ್ಯ ವೀರಪ್ಪ ಮೊಯಿಲಿಯವರೂ ಕೂಡ ಒಂದು ಪತ್ರ ಬರೆದಿದ್ದಾರೆ. ಅದಕ್ಕೆ ಕೂಡ ಉತ್ತರವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅಲ್ಲಿನ ಜನರು ಭಯಭೀತರಾಗಿದ್ದಾರೆ. ಆದುದರಿಂದ ನಾವು ಇಲ್ಲಿ ಪ್ರಸ್ತಾಪ ಮಾಡಿದಾಗ ನೀವು ಏನು ಸಾವಯವ ಬಣ್ಣ ತಯಾರಿಸಿರುವ ಉದ್ಯಮ ಎಂದು ಹೇಳುತ್ತೀರಿ ಈ ಉದ್ಯಮವು ಡೈ ತಯಾರು ಮಾಡುವ ಉದ್ಯಮ. ಒಂದು ಕಡೆ ಡೈ ಎಂದು ಹೇಳುತ್ತೀರಿ ಮತ್ತೊಂದು ಕಡೆ ಬಣ್ಣ ಎಂದು ಹೇಳುತ್ತೀರಿ. ಕನ್ನಡದಲ್ಲಿ ಬಣ್ಣ, ಇಂಗ್ಲೀಷ್‌ನಲ್ಲಿ ಡೈ, ಅಷ್ಟೇ ವ್ಯತ್ಯಾಸ. ಅದರಲ್ಲೇನೂ ವ್ಯತ್ಯಾಸ ಇಲ್ಲ. ಕಚ್ಚಾ ಮಾಲು ಏನು ಉಪಯೋಗ ಮಾಡುತ್ತಾರೆ ಅದೂ ಕೂಡ ಸ್ವಲ್ಪ ಮಾಲಿನ್ಯಕಾರಕ, ಪರಿಸರ ಮಾಲಿನ್ಯ ಮಾಡುವ ವಸ್ತುಗಳು ಬಂದಿವೆ. ಆದುದರಿಂದ ತಾವು ಅದರ ಬಗ್ಗೆ ಎಕ್ಸ್‌ಪರ್ಟ್‌ಗಳಿಂದ ತನಿಖೆ ಮಾಡಿಸಿ ಮಾಹಿತಿ ಸಂಗ್ರಹ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಯಲ್ಲಿ ಸಾಮಾನ್ಯವಾಗಿ ಇಬ್ಬರಿಗಿಂತ ಹೆಚ್ಚು ಜನರಿಗೆ ಸ್ಪಷ್ಟೀಕರಣಕ್ಕೆ ಅವಕಾಶ ಕೊಡುವುದಿಲ್ಲ. ಈಗ ರುಕ್ಮಯ್ಯನವರು ಕೇಳಿದ್ದಾರೆ, ಅದಕ್ಕೆ ಮಂತ್ರಿಗಳು ಏನು

ಹೇಳುತ್ತಾರೆ ಹೇಳಲಿ. ಮತ್ತೆ ತಮಗೆ ಒಂದು ಅವಕಾಶ ಕೊಡುತ್ತೇನೆ. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಜಿಲ್ಲೆಯವರೆಲ್ಲರೂ ಮಾತನಾಡಬೇಕೆಂದರೆ ಆಗುವುದಿಲ್ಲ.

ಶ್ರೀ ಬಿ. ಎನ್. ಶಿವಣ್ಣನವರ್ : ಮಾನ್ಯ ಸದಸ್ಯರು ಆ ಕಾರ್ಖಾನೆ ತನ್ನ ಉತ್ಪಾದನೆ ಮಾಡುವುದಕ್ಕೆ ಪ್ರಾರಂಭ ಮಾಡಿದೆ ಎಂಬ ಅಭಿಪ್ರಾಯ ಹೇಳುತ್ತಿದ್ದಾರೆ. ಅದು ಖಂಡಿತವಾಗಿ ಇನ್ನೂ ತನ್ನ ಉತ್ಪಾದನೆಯನ್ನು ಪ್ರಾರಂಭ ಮಾಡಿಲ್ಲ. ಕಾರ್ಖಾನೆ ತನ್ನ ಉದ್ದಿಮೆ ಪ್ರಾರಂಭಿಸಬೇಕಾದರೆ ಮೊದಲು ಮಾಲಿನ್ಯ ನಿಯಂತ್ರಣ ಮಂಡಲಿಗೆ ಅರ್ಜಿ ಕೊಡುತ್ತದೆ. ಆ ಮಾಲಿನ್ಯ ನಿಯಂತ್ರಣ ಮಂಡಲಿ ತನ್ನ ಕಾಯಿದೆಯ ಅಡಿಯೊಳಗೆ ಪರಿಶೀಲಿಸಿ ಮೂಲಭೂತವಾಗಿ ಕಟ್ಟಡ ವಗೈರೆ ಇದ್ದರೆ ಅದು ತನ್ನ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುತ್ತದೆ. ಅದು ಮಾಡಿದ ನಂತರ ಮುಂದೆ ನಮ್ಮ ಸರ್ಕಾರದ ಪರಿಸರ ಇಲಾಖೆಗೆ ಬರುತ್ತದೆ.

ಅಧ್ಯಕ್ಷರು : ನಾವು ವ್ಯವಹಾರಿಕವಾಗಿ ಮಾತನಾಡೋಣ. ಇದು ಅಸೆಂಬ್ಲಿ. ಅವರು ದಡ್ಡರಲ್ಲ. ಕೋಟ್ಯಾಂತರ ರೂಪಾಯಿ ಹಾಕಿ ಬಿಲ್ಡಿಂಗ್ ಇಷ್ಟೆಲ್ಲಾ ಕಟ್ಟಿ ಇಷ್ಟೆಲಾ ಮಾಡಿಕೊಂಡು ಲೈಸೆನ್ಸ್ ಸಿಗದೆ ಹೋದರೆ ನಾಳೆ ಅಲ್ಲಿ ಕುರಿ ಕಾಯುತ್ತಾರೆಯೇ? ಅವರು ಹಂತ ಹಂತವಾಗಿ ಹೀಗೆ ತಮ್ಮ ಕೆಲಸವನ್ನು ಗಟ್ಟಿ ಮಾಡಿಕೊಳ್ಳತಕ್ಕದ್ದು. ಜನರ ಪ್ರಾಣಕ್ಕೆ ಅಲ್ಲಿ ಅಪಾಯ ಆಗುವುದಾದರೆ, ಅದು ಅಲ್ಲಿ ಬರಬಾರದೆಂದು ಇದ್ದರೆ, ಪರದೇಶಗಳಲ್ಲಿ ಅವಕಾಶ ಕೊಡದೇ ಇದ್ದರೆ, ಏತಕ್ಕೆ ಅದರ ಬಗ್ಗೆ ನೀವು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುತ್ತೀರಿ? ಗಟ್ಟಿ ನಿಲುವು ಪ್ರಕಟ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಲೈಸೆನ್ಸ್ ಯಾವಾಗ ಕೊಟ್ಟಿರಿ?

ಶ್ರೀ ಕೆ. ಜಯರಾಮ ಶೆಟ್ಟಿ : ಎಲ್ಲಾ ಆದನಂತರ ಇವರು ಏನು ಲೈಸೆನ್ಸ್ ರದ್ದು ಮಾಡುತ್ತಾರೆಯೆ?

ಅಧ್ಯಕ್ಷರು : ನಾನು ತಮ್ಮ ಮುಂದಿಟ್ಟಿದ್ದೇನೆ. ನೀವು ಯಾವುದೇ ಕ್ಷಣದಲ್ಲಿ ಪಾರ್ಟಿ ಆಧಾರದ ಮೇಲೆ ಕೆಲಸ ಮಾಡುವ ಹಾಗಿಲ್ಲ. ಜನಹಿತಕ್ಕಾಗಿ ನಾವೆಲ್ಲರೂ ಇಲ್ಲಿ ಕೆಲಸ ಮಾಡತಕ್ಕದ್ದು. ಎಲ್ಲಿ ಜನಹಿತಕ್ಕೆ ಧಕ್ಕೆ ಬರುತ್ತದೆ ಅಲ್ಲಿ ನಾನು ಪ್ರತ್ಯಕ್ಷವಾಗಿ ಹಾಜರಾಗುತ್ತಿದ್ದೇನೆ. ಶಿವಣ್ಣನವರೇ, ಅವರು ಇಷ್ಟೆಲ್ಲಾ ವೆಚ್ಚ ಮಾಡಿ ಬಂಡವಾಳ ಹೂಡಿದ ಮೇಲೆ ಅವರು ಸುಮ್ಮನಿರುವುದಿಲ್ಲ. ನೀವು ಹೇಳಿದಿರಿ, ಉತ್ಪಾದನೆ ಮಾಡಿಲ್ಲವೆಂದು. ಹೀಗಿದ್ದರೆ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಪೂರ್ತಿ ಆದಮೇಲೆ ಉತ್ಪಾದನೆ ಮಾಡುವುದು. ಆಮೇಲೆ ಆವತ್ತು ಇನ್ನೊಂದು ನೆಪ ಹುಡುಕುತ್ತಾರೆ. ಅಧಿಕಾರಿಗಳು ಆ ಸಮಯಕ್ಕೆ ಸಂದರ್ಭಕ್ಕೆ ತಕ್ಕಂತೆ ಅವರದೇ ಆದ ಕಾರಣಗಳನ್ನು ಹೇಳಿಕೊಳ್ಳುತ್ತಾರೆ. ನಮ್ಮ ಮೇಲೂ ಒತ್ತಡವನ್ನು ಹೇರುತ್ತಾರೆ. ನೀವು ಖಚಿತವಾಗಿ ಒಂದು ನಿಲುವನ್ನು ತಳೆದು, ಇದು ಅಪಾಯಕಾರಿಯಾಗಿದೆ ಎಂದು ಹೇಳಿ. ಇದಕ್ಕೆ ನೀವು ಅನುಮತಿ ಕೊಡುತ್ತೀರೋ ಇಲ್ಲವೋ ನಿಮ್ಮ ಸರ್ಕಾರದ ನೀತಿ ಏನು, ನಿಲುವು ಏನು ಎಂಬುದು ತಿಳಿಸಿ.

ಶ್ರೀ ಬಿ. ಎನ್. ಶಿವಣ್ಣನವರ್ : ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಅಧ್ಯಕ್ಷರು : ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ. ಜಯರಾಮ ಶೆಟ್ಟರೇ, ನೀವು ನಾಳೆ ಮಂತ್ರಿಯಾದರೂ ಅಧಿಕಾರಿಗಳು ಬರೆದುಕೊಟ್ಟದನ್ನು ಓದಿ, ಆಮೇಲೆ ನೀವು ಆಲೋಚನೆ ಮಾಡುವುದು.

ಶ್ರೀ ಕೆ. ಜಯರಾಮ ಶೆಟ್ಟಿ : ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕಲ್ಲಾ. ನಿರ್ದಿಷ್ಟವಾಗಿ ಗ್ರಾಮಾಂತರ ಪ್ರದೇಶಕ್ಕೆ ಇಂಡಸ್ಟ್ರೀ ಅಲ್ಲವೆಂದು .....

ಅಧ್ಯಕ್ಷರು : ನೀವು ಮಂತ್ರಿಯಾದಾಗ ಹೇಗೆ ಮಾಡುತ್ತೀರಿ ನೋಡೋಣ.

ಶ್ರೀ ಬಿ. ಎನ್. ಶಿವಣ್ಣನವರ್ : ಮಾನ್ಯ ಸದಸ್ಯರು ಈಗಾಗಲೇ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಸಮಸ್ಯೆಯ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಸ್ಥಳಕ್ಕೆ ಕಳುಹಿಸಿಕೊಟ್ಟು ತಜ್ಞರ ಸಮಿತಿಯ ವರದಿ ಬಂದನಂತರ ಕಾನೂನು ರೀತ್ಯಾ ಏನು ಕ್ರಮ ಕೈಗೊಳ್ಳಬೇಕಾಗುತ್ತದೆ ಆ ಕ್ರಮವನ್ನು ಕೈಗೊಳ್ಳುತ್ತೇನೆ. ಅಲ್ಲಿಯವರೆಗೆ ನಡೆಯುತ್ತಿರುವ ಕೆಲಸಕಾರ್ಯಗಳನ್ನು ಹಾಗೇ ಇಡಲಿಕ್ಕೆ ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ದೊಡ್ಡ ರಾಜಕಾರಣಿಗಳ ಪ್ರಭಾವ ಇದೆ. ಅವರು ಸುಮಾರು 50-60 ಕೋಟಿ ರೂಪಾಯಿಗಳ ಬಂಡವಾಳ ಹಾಕುತ್ತಿದ್ದಾರೆ. ನನ್ನದೇನೆಂದರೆ, ಈ ನಿಮಿಷದವರೆಗೆ ಆ ಗ್ರಾಮ ಪಂಚಾಯಿತಿಯಿಂದ ಕಟ್ಟಡ ಕಟ್ಟುವುದಕ್ಕೆ ಲೈಸೆನ್ಸ್ ಕೊಟ್ಟಿಲ್ಲ. ಲೈಸೆನ್ಸ್ ಕೊಡದೆ 90 ಪರ್ಸೆಂಟ್ ಕೆಲಸ ಆಗಿದೆ. ಅವರಿಗೆ ಅವಕಾಶ ಕೊಡುತ್ತಿದ್ದೀರಿ, ಈ ನಿಮಿಷದವರೆಗೆ ಸದರಿ ಉದ್ಯಮ ಪರಿಸರ ಇಲಾಖೆಯ ವತಿಯಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸಿರುವುದಿಲ್ಲ. ಇದು ನಿಮ್ಮ ಉತ್ತರದಲ್ಲಿದೆ. ನಮ್ಮ ಗಮನ ಸೆಳೆಯುವ ಸೂಚನೆ ಹಾಕಿದ ಮೇಲೆ ಅವರು ಅಲ್ಲಿಗೆ ಅರ್ಜಿ ಸಲ್ಲಿಸಿದ್ದಾರೆ. ಮತ್ತೆ ನಿಮ್ಮ ಪರಿಸರ ಇಲಾಖೆಯ ವರದಿ ಇದೆ. ಅದನ್ನು ಟೇಬಲ್ ಮಾಡಿ. ಹೇಗೆ ಪರಿಸರ ಮಾಲಿನ್ಯಕ್ಕೆ ಧಕ್ಕೆ ಆಗುತ್ತದೆಂಬ ಬಗ್ಗೆ ವಿವರ ಅದರಲ್ಲಿದೆ. ಅದಕ್ಕೋಸ್ಕರ ಲೈಸೆನ್ಸ್ ಕೊಡದೆ ಕಟ್ಟಡ ಕಟ್ಟಿದ್ದಾರೆ. ಪರಿಸರ ಇಲಾಖೆಯಲ್ಲಿ ಪ್ರಾಜೆಕ್ಟ್ ರಿಪೋರ್ಟ್ ಇದೆ, ಅದರ ವಿವರವನ್ನು ನೋಡದೆ, ಪಲ್ಯೂಷನ್ ಬೋರ್ಡ್‌ನಿಂದ ಅನುಮತಿ ಸಿಗದೆ 90 ಪರ್ಸೆಂಟ್ ಕೆಲಸ ಹೇಗೆ ಆಗಿದೆ.

MR. SPEAKER :I will request the Hon'ble Deputy Chief Ministers to reply ಈಗ ಕನ್‌ಸಟ್ರಕ್ಷನ್ ಆಗುತ್ತಿರುವುದು ಅನ್‌ಲೈಸನ್ಸ್‌ನಿಂದ ಅವರು ಇವರಿಗೆ ಅಪ್ಲೈ ಮಾಡಿಕೊಳ್ಳುವುದು ಅದೆಲ್ಲಾ ಮಾಡಲಿ. But should the construction go on or not?

ಶ್ರೀ ಸಿದ್ದರಾಮಯ್ಯ : ಅಲ್ಲಿ ಏನೇನು ನಡೆಯುತ್ತಿದೆ ಅದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಂಡು, ಅಧಿಕಾರಗಳನ್ನು ಕಳುಹಿಸಿ ಅಲ್ಲಿಂದ ವರದಿ ತರಿಸಿಕೊಂಡು ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ಎಸ್ ಯಡಿಯೂರಪ್ಪ : ಸದನದ ಸಮಿತಿ ಮಾಡಲಿ. ಈಗಾಗಲೇ 10-12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದು ಆಗದ ಹಾಗೆ ನೋಡಿಕೊಂಡರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ : ಅದನ್ನು ನಿಲ್ಲಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ತಕ್ಷಣ ಕನ್‌ಸ್ಟ್ರಕ್ಷನ್ ವರ್ಕ್ ಸ್ಟಾಪ್ ಮಾಡುತ್ತಾರೆ. ಇದರಿಂದ ಆಗಬಹುದಾದ ಎಲ್ಲಾ ಅಪಾಯಗಳನ್ನು ತಿಳಿದುಕೊಂಡು ಬರುವುದಕ್ಕೆ ತಜ್ಞರ ಸಮಿತಿಯನ್ನು ಕಳುಹಿಸುತ್ತಾರೆ.

ಶ್ರೀ ಬಿ. ಎಸ್ ಯಡಿಯೂರಪ್ಪ : ಯಾರು ತನಿಖೆ ಮಾಡುವುದು?

ಅಧ್ಯಕ್ಷರು : ತಜ್ಞರು, ತಜ್ಞರು. ನಮ್ಮ ಸದನದ ಸಮಿತಿಯವರು ಹೋದರೆ ನಮಗೆ ಏನು ಹೊತ್ತಾಗುತ್ತದೆ?

ಶ್ರೀ ಬಿ. ಎಸ್. ಯಡಿಯೂರಪ್ಪ : ತಜ್ಞರನ್ನು ಕರೆದುಕೊಂಡು ಹೋದರೆ ವಾಸ್ತವಿಕ ಸ್ಥಿತಿಯನ್ನು ತಿಳಿಸುವುದಕ್ಕೆ ಅನುಕೂಲವಾಗುತ್ತದೆಯೇ? ಅಲ್ಲಿ ಎಷ್ಟು ಪ್ರಭಾವ ಆಗಿದೆ ಎಂದರೆ, ಕೆಲವು ಪ್ರಮುಖ ರಾಜಕಾರಣಿಗಳ ಪ್ರಭಾವ ಅಲ್ಲಿ ಇದೆ.

ಶ್ರೀ ಸಿದ್ದರಾಮಯ್ಯ : ಯಾವ ರಾಜಕಾರಣಿಗಳ ಪ್ರಭಾವಕ್ಕೂ ನಾವು ಒಳಗಾಗುವುದಿಲ್ಲ. ಈಗ ಏನು ಕನ್‌ಸ್ಟ್ರಕ್ಷನ್ ವರ್ಕ್ ನಡೆಯುತ್ತಿದೆ ಅದನ್ನು ತಕ್ಷಣ ನಿಲ್ಲಿಸುವುದಕ್ಕೆ ಸೂಚನೆ ಕೊಟ್ಟು, ನಾಳೆಯೇ ಅಧಿಕಾರಿಗಳನ್ನು ಕಳುಹಿಸಿ ವರದಿ ಬಂದ ತಕ್ಷಣ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎನ್. ಯೋಗೀಶ್‌ಭಟ್ : ಅಲ್ಲಿ ಸಮಾನಾಂತರವಾಗಿ ಕೆಲಸ ನಡೆಯುತ್ತಿದೆ.

MR. SPEAKER : That is altogether a different thing.

ಶ್ರೀ ಕೆ. ಜಯರಾಮ ಶೆಟ್ಟಿ : ಅವರ ಬಗ್ಗೆ ಕ್ರಮ ಕೈಗೊಳ್ಳಬೇಕು. ನೀವು ಸಮಿತಿಯವರನ್ನು ಕಳುಹಿಸಬಹುದು.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ಇಷ್ಟೇ ವಿನಂತಿಸುತ್ತೇನೆ, ಗಮನ ಸೆಳೆಯುವ ಸೂಚನೆ ಎಂದರೆ ನಾವು ಗಮನ ಸೆಳೆಯುತ್ತೀರಿ. ಸರ್ಕಾರದವರು ಹೇಳಿಕೆ ಕೊಡುತ್ತಾರೆ. ಆ ಹೇಳಿಕೆ ಆದಮೇಲೆ ಇಬ್ಬರು ಸದಸ್ಯರಿಗೆ ಮೀರಲಾರದಂತೆ ಸ್ಪಷ್ಟೀಕರಣ ಕೇಳಬೇಕು. ಇದು ವಿಶೇಷ ಪ್ರಕರಣ ಎಂದು ಇನ್ನೂ ಇಬ್ಬರಿಗೂ ಅವಕಾಶ ಕೊಟ್ಟಿದ್ದೇನೆ. ಮತ್ತೆ ಮತ್ತೆ ಎಲ್ಲರೂ ಎದ್ದು ನಿಲ್ಲತಕ್ಕದ್ದು ಸರಿಯಲ್ಲ. ಸರ್ಕಾರ ಕೂಡ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ನಾವು ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗಿದೆ. ದಯಮಾಡಿ ಸಹಕರಿಸಿ.

ಶ್ರೀ ಎಸ್. ಸುರೇಶ್ ಕುಮಾರ್ : ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳಿಕೊಳ್ಳುವುದ ಏನೆಂದರೆ, ರಾಜಾಸ್ತಾನ ಸರ್ಕಾರ ಒಂದು ಹೊಸ ಕಾನೂನು ತಂದಿದೆ. ``Right to information for the citizen" may be on some fees, ಯಾವುದೇ ನಾಗರೀಕ ತನ್ನ ಊರಿನಲ್ಲಿ ನಡೆಯುವ ಪ್ರಾಜೆಕ್ಟ್ ಇರಬಹುದು, ಉದ್ದಿಮೆ ಇರಬಹುದು, ಅದರ ಬಗ್ಗೆ ಮಾಹಿತಿ ಕೇಳಿದಾಗ ಸಂಬಂಧಪಟ್ಟ ಸಂಸ್ಥೆಗಳು ನಾಗರೀಕರಿಗೆ ಮಾಹಿತಿ ಒದಗಿಸಬೇಕು. 5-10 ರೂಪಾಯಿ ಫೀ ತೆಗೆದುಕೊಂಡು

ಕೊಡಬೇಕು. ಆದರೆ ಈ ಸಂದರ್ಭದಲ್ಲಿ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಒಂದು ಪತ್ರ ಬರೆದರು. ದಿನಾಂಕ10-4-97ರಂದು ಕಂದಾಯ ಪರಿವೀಕ್ಷಕರ ಕಛೇರಿ ಮೂಡಬಿದ್ರೆಯಿಂದ, ಏಂಜೆಲ್ ಹಾರ್ಡ್ ಸಂಸ್ಥೆಯವರು ಅನಧಿಕೃತ ಕಟ್ಟಡ ನಿರ್ಮಾಣ ಮಾಡುತ್ತಿರುವ ವಿಚಾರದಲ್ಲಿ ಶ್ರೀ ಮೊಯಿಲಿಯವರು ಬರೆದ ಪತ್ರದ ಮೇರೆಗೆ 15-4-97ರಂದು ವಿಚಾರಣೆಗೆ ಬರುವುದಾಗಿ ತಿಳಿಸಿದ್ದು ಆ ದಿನ ಊರಿನವರು ಸೇರಿ, ಈ ಕಾರ್ಖಾನೆ ನಿರ್ಮಾಣ ಮಾಡುವ ಕೆಲಸವನ್ನು ಕೂಡಲೇ ನಿಲ್ಲಿಸಬೇಕೆಂದೂ, ಸದರಿ ಕಾರ್ಖಾನೆಗೆ ಪಂಚಾಯಿತಿ ವತಿಯಿಂದ ಕಟ್ಟಡ ಕಟ್ಟಲು ಅನುಮತಿ ಇಲ್ಲದೆ ನಿರ್ಮಿಸುತ್ತಿದ್ದಾರೆಂದು ಲಿಖಿತ ಮೂಲಕ ಕೊಟ್ಟಿರುತ್ತಾರೆ. ಈ ವಿಚಾರಣಾ ಸಭೆಗೆ ಪಂಚಾಯಿತಿ ಕಾರ್ಯದರ್ಶಿಯವರು ಹಾಜರಿರಬೇಕೆಂದು ನೋಟೀಸ್ ಕಳುಹಿಸಿದ್ದರೂ ಕೂಡ ಆ ಕಾರ್ಯದರ್ಶಿಯವರು ಗೈರು ಹಾಜರಾಗಿದ್ದರು. ಬಲಾತ್ಕಾರ ಮಾಡಿ ಕಡಂದಲೆ ಗ್ರಾಮ ಪಂಚಾಯಿತಿ ಸೆಕ್ರೆಟರಿ ಮೂಲಕ ಹೊಸ ಮಾರ್ಗವನ್ನು ಮಾಡುತ್ತಿದ್ದಾರೆ. ಕೊನೆಯದಾಗಿ, ನಾನು ಹೇಳುವುದೇನೆಂದರೆ, ಸದರಿ ಕಂಪನಿಯವರು ಗ್ರಾಮಸ್ಥರಿಗೆ ಯಾವ ತರಹದ ಮಾಹಿತಿಯನ್ನೂ ನೀಡದೆ, ಹಗಲೂ-ರಾತ್ರಿ ಕೆಲಸ ಮಾಡುತ್ತಿದ್ದಾರೆ. They are really under oppression. ಏನಾಗುತ್ತದೆಯೋ ಎನ್ನುವ ಆತಂಕ. ನನಗೆ ಒಂದು ಸಂಶಯ ಇರುವುದೇನೆಂದರೆ, ಕರ್ನಾಟಕದಲ್ಲಿ ವಿವಿಧ ಇನ್‌ಸ್ಟಿಟ್ಯೂಷನ್‌ಗಳೀನಿವೆ, are they anti-people? ಇವತ್ತು ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಇರುವುದು. it should control the pollution and it should not create pollution. It should not become a pollution Creating Board. ಇದನ್ನು ನಾನು ಮತ್ತೆ ಸರ್ಕಾರದ ಮೂಲಕ ಸ್ಥಳೀಯ ಜನರ ಹಿತಕ್ಕೋಸ್ಕರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಸಭಾಧ್ಯಕ್ಷರೆ, ಗ್ರಾಮ ಪಂಚಾಯಿತಿ ಕಾನೂನಿನ ಪ್ರಕಾರ, ಕೂಡ ಕ್ರಮ ಕೈಗೊಳ್ಳುತ್ತೇನೆ. ಅದನ್ನು ಮಾಡಬಹುದು.

ಶಾಸನ ರಚನೆ ಕಾರ್ಯಕಲಾಪಗಳು

ಎ) ವಿಧೇಯಕಗಳ ಮಂಡನೆ

ಅ) ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,